ಶ್ರೀ ಎಚ್. ಡಿ. ದೇವೇಗೌಡ.—ಪಾಲಿಟೆಕ್ನಿಕ್ ಮತ್ತು ಇಂಜನಿಯರಿಂಗ್ ಸ್ಕೂಲ್‌ನಲ್ಲಿ ತರಬೇತು ಹೊಂದಿರತಕ್ಕ ಡಿಪ್ಲೊಮಾ ಹೋಲ್ಡರುಗಳಿಗೆ ಈ ಸ್ಕೇಲು ಅನ್ವಯಿಸುತ್ತದೆಯೇ ?

†ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು):—ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್‌ನಿಂದ ಕೆಲವು ಜನ ಬರುತ್ತಾರೆ, ಪಾಲಿಟೆಕ್ನಿಕ್‌ನಿಂದ ಪಾಸ್ ಆದ ಡಿಪ್ಲೊಮಾ ಹೋಲ್ಡರುಗಳು ಇದ್ದಾರೆ, ಮೊದಲು ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಿಂದ ಪಾಸ್ ಆದವರಿಗೆ 110-220 ಸ್ಕೇಲ್ ಕೊಡುತ್ತಾ ಇದ್ದೆವು, ಪಾಲಿಟೆಕ್ನಿಕ್‌ನಲ್ಲಿ ಪಾಸ್ ಆದವರಿಗೆ 150-320 ರೂಪಾಯಿಗಳ ಸ್ಕೇಲ್ ಕೊಡುತ್ತಾ ಇದ್ದೆವು. ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಡಿಪ್ಲೊಮಾ ಹೋಲ್ಡರುಗಳು ಅಜಿಟೇಟ್ ಮಾಡಿ ನಮ್ಮನ್ನು ಪಾಲಿಟೆಕ್ನಿಕ್ ಡಿಪ್ಲೊಮಾ ಹೋಲ್ಡರ್ಸ್ ಜೊತೆಗೇ ಈಕ್ವೇಟ್‌ಮಾಡಿ ನಮಗೂ ಅಷ್ಟೇ ಸ್ಕೇಲ್ ಕೊಡಿ ಎಂದು ಕೇಳಿದರು. ಇದನ್ನೆಲ್ಲಾ ನಿನ್ನೆಯ ದಿವಸ ಹೇಳಿದ್ದೇನೆ. 61ರಲ್ಲಿ ಪಾಸ್ ಮಾಡಿದ ಜಿ. ಓ. ಬಗ್ಗೆ ಪಾಲಿಟೆಕ್ನಿಕ್ ಡಿಪ್ಲೊಮಾ ಹೋಲ್ಡರ್ ಪ್ರೊಟೆಸ್ಟ್ ಮಾಡಿದರು, ರೆಪ್ರಸೆಂಟೇಷನ್ ಕೊಟ್ಟರು, ಅದನ್ನು ಸರ್ಕಾರದವರು ಯೋಚನೆ ಮಾಡಿ, ಅದಕ್ಕೆ ಸಂಬಂಧಪಟ್ಟ ಚೀಫ್ ಇಂಜನಿಯರು ಅವರ ಕ್ವಾಲಿಫಿಕೇಷನ್ ಏನು, ಇವರ ಕ್ವಾಲಿಫಿಕೇಷನ್ ಏನು ಎಂಬುದನ್ನೆಲ್ಲಾ ವಿಚಾರ ಮಾಡಿದ ನಂತರ ಅವರಿಗೂ ಇವರಿಗೂ ಒಂದೇ ಸ್ಕೇಲ್ ಇರಬೇಕೆಂದು ನಿರ್ಧರ ಮಾಡಿದ್ದೆರು. ಈಗ ಇರುವ ಆರ್ಡರ್ ಪ್ರಕಾರ 150-320 ಸ್ಕೇಲು ಸಿಕ್ಕಿದೆ, ಅದನ್ನೆ ಈ ಸ್ಕೇಲನ್ನು ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ ಡಿಪ್ಲೊಮಾ ಹೋಲ್ಡರುಗಳಿಗೆ ಕೊಡಬಾರದು, ಅವರನ್ನು ಆ ರೀತಿ ಈಕ್ವೇಟ್ ಮಾಡಿದ್ದು ಸರಿಯಲ್ಲ ಎಂದು 61ರಲ್ಲಿ ಅದ ಜಿ. ಓ. ವಿತ್‌ಡ್ರಾ ಮಾಡಬೇಕೆಂದು ಮಾಡಿದ್ದೇವೆ, ವಿತ್‌ಡ್ರಾ ಮಾಡಿಲ್ಲ. ಅದಕ್ಕೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಆಗಬೇಕು ; ಅದು ಆದಮೇಲೆ ಇದೆಲ್ಲಾ ಸರಿಹೋಗುತ್ತದೆ.

Bus Stands under construction in North Kanara District.

*Q.—1130. Smt. V. V. MIRJANKAR (Kumta).—

Will the Government be pleased to state :—

(*a*) the number of bus stands which are under construction in the District of North Kanara ;

(*b*) when the sanction was accorded to the works at Ankola, Kumta and Siddapur and at what stage these works are pending ?

A.—Sri D. DEVARAJ URS (Minister for Labour, Housing and Transport).—

(*a*) Three.

(*b*)—

	Date of Administrative Approval.	*Stage of the work.*
1 Ankola...	14-4-1960	The work has come upto Lintel level.
2 Kumta...	10-6-1959	50 per cent of the roof work is completed.
3 Siddapur...	August 1958.	The work was completed in 1959.

ಶ್ರೀಮತಿ ವಿ. ವಿ. ಮಿರ್ಜಾಂಕರ್.—(ಎ) ಪ್ರಶ್ನೆಗೆ ಉತ್ತರವಾಗಿ ಮೂರು ಎಂದು ಉತ್ತರ ಹೇಳಿದ್ದೀರಿ. ಅವುಗಳನ್ನು ಯಾವ ಯಾವ ಕಡೆ ಮಾಡುತ್ತಾ ಇದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಅಂಕೋಲ, ಕುಮಟ ಮತ್ತು ಎರ್ಮಾಪುರ ಸಿದ್ದಾಪುರದಲ್ಲಿ ಮುಗಿದಿದೆ.

ಶ್ರೀಮತಿ ವಿ. ಪಿ. ಮಿರ್ಜಾಂಕರ್.—(ಬ) ಪ್ರಶ್ನೆಯಲ್ಲಿ ಹೇಳಿರುವ ಕೆಲಸಗಳಿಗೆ ಎಷ್ಟು ವೆಚ್ಚ ತಗಲಬಹುದು ಎಂದು ಅಂದಾಜು ಮಾಡಲಾಗಿತ್ತೋ ಅದು ಈಗ ಮೂರು ನಾಲ್ಕು ವರ್ಷ ಕಳೆದದ್ದರಿಂದ ಹೆಚ್ಚು ಕಡಮೆಯಾಗುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ಕುಮಟಾದಲ್ಲಿ 66 ಸಾವಿರ ರೂಪಾಯಿಗಳವರೆಗೂ ಕೆಲಸ ಆಗುವುದು ಇದೆ, ಅಂಕೋಲಾದಲ್ಲಿ 60 ಸಾವಿರ ರೂಪಾಯಿಗಳವರೆಗೂ ಕೆಲಸ ಆಗುವುದು ಇದೆ ಮತ್ತು ಎರ್ಮಾಪುರದಲ್ಲಿ 60 ಸಾವಿರ ರೂಪಾಯಿಗಳ ಕೆಲಸ ಆಗುವುದು ಇದೆ, ಸಿದ್ದಾಪುರದಲ್ಲಿ 14 ಸಾವಿರ ರೂಪಾಯಿಗಳ ಕೆಲಸ ಮುಗಿದು ಹೋಗಿದೆ.

ಶ್ರೀ ಎಸ್. ಪಿ. ಫಾಯ್ದೆ.—ಕಂಟ್ರಾಕ್ಟರಿಗೆ ಸಿಮೆಂಟ್ ಸಿಕ್ಕದೇ ಕೆಲಸ ನಿಧಾನವಾಗಿದೆ ಎಂಬುದು ಸರ್ಕಾರದವರ ನಜರಿಗೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅದೂ ಒಂದು ಕಾರಣ ಇದೆ.

ಶ್ರೀ ಎಸ್. ಪಿ. ಫಾಯ್ದೆ.—ಈ ಜಿಲ್ಲೆಯಲ್ಲಿ ಕೆಲವು ತಾಲ್ಲೂಕ್ ಜಾಗಗಳಲ್ಲಿ ಬಸ್ ಸ್ಟ್ಯಾಂಡೇ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಮತ್ತು ಅಂತಹ ಕಡೆ ತಕ್ಷಣ ಕಟ್ಟಿಸಲಿಕ್ಕೆ ಸರ್ಕಾರದವರು ಇಚ್ಛಿಸುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳಿದಂತೆ ಸಿಮೆಂಟ್ ಸಿಕ್ಕದೇ ಇರುವ ಕಾರಣ ಆ ಕೆಲಸ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕುಮಟಾ ಮತ್ತು ಸಿದ್ದಾಪುರ ಇಲ್ಲೆರಡಾ ಯಾವ ಯಾವ ಇನಪಿಯಲ್ಲಿ ಕೆಲಸ ಪುರು ಮಾಡಿದಿರಿ, ? ಜೆಂಡರ್ ಕರೆದ್ದಿದ್ದಿರಾ ? ಪ್ರತಿಯೊಂದು ಬಸ್ ಸ್ಟ್ಯಾಂಡಿನಲ್ಲೂ ಏನೇನು ಅನುಕೂಲ ಕಲ್ಪಿಸುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—14-4-60ರಲ್ಲಿ ಅಂಕೋಲಾದ ಸಂಬಂಧವಾಗಿ ಮಂಜೂರಾತಿ ಆಗಿದೆ, ಕುಮಟಾದ ಬಗ್ಗೆ 10-6-59ರಲ್ಲಿ ಮಂಜೂರಾತಿ ಆಗಿದೆ, ಸಿದ್ದಾಪುರದ ಬಗ್ಗೆ 1958ರಲ್ಲಿ ಮಂಜೂರಾತಿ ಆಗಿದೆ ಮತ್ತು ಇದರ ಕೆಲಸ ಮುಗಿದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಿಮೆಂಟ್ ಇಲ್ಲ ಎಂದರೆ, ಗಾರೆಯಲ್ಲೇ ಸಾಮಾನ್ಯವಾದ ಕಟ್ಟಡ ಕಟ್ಟಿದರೆ ಅಲ್ಲಿನ ಜನ ಬೇಡ ಅನ್ನುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸ್ನೇಹಿತರ ನಲಹೆ ಬಹಳ ಉತ್ತಮವಾದದ್ದು, ಅದನ್ನು ನಾನು ಒಪ್ಪುತ್ತೇನೆ. ಆದರೆ ಇಂಜನಿಯರುಗಳು ಅದನ್ನು ಒಪ್ಪುವುದಿಲ್ಲ, ಆರ್. ಸಿ. ಸಿ. ರೂಫಿಂಗ್ ಹಾಕಬೇಕಾದರೆ ಸಿಮೆಂಟ್ ಬೇಕೆ ಬೇಕೆಂದು ಹೇಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆರ್. ಸಿ. ಸಿ. ಹಾಕಬೇಕಾದರೆ ಸಿಮೆಂಟ್ ಬೇಕಾಗುತ್ತದೆ, ಹೆಂಚಿನದು ಹಾಕಿದರೆ ಏನಾಗುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ಹೆಂಚಿನದೂ ಹಾಕಬಹುದು, ಆದರೆ ಮುಂದೆ ಫಸ್ಟ್ ಫ್ಲೋರ್, ಸೆಕೆಂಡ್ ಫ್ಲೋರ್ ಹಾಕಬೇಕಾದ ಸಂದರ್ಭ ಬಂದಾಗ ತೊಂದರೆಯಾಗುತ್ತದೆ, ಆದ್ದರಿಂದ ಹೆಂಚು ಹಾಕುವುದು ಬೇಡ ಎನ್ನುತ್ತಾರೆ. ಆದಕ್ಕೂ ಇದಕ್ಕೂ ಕಾಸ್ಟ್‌ನಲ್ಲೂ ಬಹಳ ವ್ಯತ್ಯಾಸ ಬರುವುದಿಲ್ಲ ಆದ್ದರಿಂದ ಎರ್ಲಾ ಕಡೆಯಲ್ಲೂ ಆರ್. ಸಿ. ಸಿ. ಫ್ಲೋರಿಂಗ್ ಮತ್ತು ರೂಫಿಂಗ್‌ನ್ನೇ ಹಾಕಬೇಕೆಂಬ ಒಂದು ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದೇವೆ.

ಶ್ರೀ ಎಸ್. ಎಸ್. ಕೊಳ್ಕೇಬೈಲ್.—ಈ ಕಟ್ಟಡದ ಕೆಲಸ ಮಾಡುವಾಗ ತಮಗೆ ಫಾಯ್ದೆ ಆಯಿತೇ ಅಥವಾ ಲುಕ್ಸಾನಾಯಿತೇ ?

ಶ್ರೀ ಡಿ. ದೇವರಾಜ ಅರಸ್.—ಫಾಯ್ದೆ ಇಲ್ಲ, ಲುಕ್ಸಾನು ಏನೂ ನೇರವಾಗಿ ಇರಾಖೆಗೆ ಇಲ್ಲದೇ ಹೋದರೂ ಜನಗಳ ದೃಷ್ಟಿಯಿಂದ ಈ ಏರ್ಪಾಡು ಆಗುವುದು ಒಳ್ಳೆಯದು, ಸಿಮೆಂಟ್ ಅಭಾವ ಎರುವುದರಿಂದ ಕೆಲಸ ಬೇಗ ಪೂರೈಸುವುದಕ್ಕೆ ಸಾಧ್ಯವಾಗುತ್ತ ಇಲ್ಲ.

ಶ್ರೀಮತಿ ನುಶೀಲಾಬಾಯಿ ಹೀರಾಚೆಂದ್ ಷಾ.—ಈ ಮೂರು ಕಾಂಟ್ರಾಕ್ಟುಗಳನ್ನೂ ಬೇರೆ ಬೇರೆಯವರಿಗೆ ಕೊಟ್ಟಿದ್ದೀರಾ ಅಥವಾ ಒಬ್ಬರಿಗೇ ಕೊಟ್ಟಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಬಹುಶಃ ಬೇರೆ ಬೇರೆಯವರಿಗೆ ಕೊಟ್ಟಿದ್ದಾರೆ, ಆ ಮೂರು ಜನರೂ ಅವರ ಊರಿನವರೇ.

ಶ್ರೀ ಟಿ. ಮಾದಯ್ಯ ಗೌಡ.—ನಾರ್ತ್ ಕೆನರಾ ಜಿಲ್ಲೆಯಲ್ಲಿ ಮತ್ತೆ ಯಾವ ಯಾವ ಹಳ್ಳಿಯಲ್ಲಿ ಬಸ್ ಸ್ಟ್ಯಾಂಡ್ ನಿರ್ಮಿಸಬೇಕೆಂದು ಸರ್ಕಾರದವರು ಉದ್ದೇಶಿಸಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ನದ್ಯಕ್ಕೆ ಯಾವ ಕಡೆಯೂ ಇಲ್ಲ ಆದರೆ ಹನ್ನೆರಡು ಕಡೆ ಬಸ್ ಷೆಲ್ಟರ್ ಕಾಮಗಾರಿಯನ್ನು ತೆಗೆದು ಕೊಳ್ಳಬೇಕೆಂದು ಉದ್ದೇಶಿಸಿದ್ದೇವೆ.

ಶ್ರೀ ಎಸ್. ನುಬ್ಬಯ್ಯ ನಾಯಕ್.—ಅಂಕೋಲ ಮತ್ತು ಕುಂಟಾ ಈ ಎರಡು ಸ್ಥಳಗಳಲ್ಲಿ ನುಮಾರು 66 ಸಾವಿರ ರೂಪಾಯಿಗಳಲ್ಲಿ ರೆಸ್ಟ್‌ಹೌಸುಗಳನ್ನು ಕಟ್ಟಿಸುವ ಮತ್ತು ಅಲ್ಲಿಯ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ವಿಚಾರವೇನಾಯಿತು ? ಯಾವ ಬಗೆಯ ಸೌಕರ್ಯಗಳನ್ನು ಕಲ್ಪಿಸಬೇಕೆಂದಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಮಳೆಬಿಸಿಲುಗಳ ತೊಂದರೆ ತಪ್ಪಿಸುವುದು, ಫಲಹಾರ ಮಂದಿರ, ಕಕ್ಕಸು, ಗೆಸ್ಟ್‌ಹೌಸ್ ಇತ್ಯಾದಿ ಸೌಕರ್ಯಗಳೆಲ್ಲಾ ಇರುತ್ತವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂರು ಕೆಲಸಗಳ ಕಂಟ್ರಾಕ್ಟನ್ನು ಒಬ್ಬರಿಗೇ ಕೊಟ್ಟಿದ್ದೀರೋ ಅಥವಾ ಬೇರೆಬೇರೆಯವರಿಗೆ ಕೊಟ್ಟಿದ್ದೀರೋ ಎಂದು ಈಗತಾನೆ ಶ್ರೀಮತಿ ನುಶೀರಾಬಾಯ್ ಷಾ ಅವರು ಕೇಳಿದರು. ಬಜಾಪುರದಲ್ಲಿ ಈ ಬಗ್ಗೆ ಶ್ರೀಮತಿ ನುಶೀರಾಬಾಯ್ ಷಾ ಅವರಿಗೆ ಯಾವುದಾದರೂ ಕಾಂಟ್ರಾಕ್ಟನ್ನು ಕೊಟ್ಟಿದ್ದೀರಾ ?

Mr. SPEAKER.—I disallow the question.

3-00 P.M.

ಶ್ರೀ ಎಸ್. ಪಿ. ಹಾಯದೆ.—ಉತ್ತರ ಕರ್ನಾಟಕದಲ್ಲಿ ಎಲ್ಲೆಲ್ಲಿ ಈ ಬಸ್ ಷೆಡ್‌ಗಳನ್ನು ಕಟ್ಟಬೇಕೆಂದಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಹಿತ್ತಿಗೇರಿ, ಅವರ್ಸಾ, ಅಮುಂಡ್ಳಳ್ಳಿ, ಇಂಡಿಕಾ, ಇಡಕುಂಜಿ, ಮಾನಾಕುಡಿ, ಧಾರಪುರ, ಹಳದೀಪುರ, ಕಟುಗಲ್ ಕರ್ಕಿ, ಅಮಾನಾಪುರ, ಅರಗಾ ಈ 12 ಕಡೆ ಷೆಲ್ಟರುಗಳನ್ನು ಕಟ್ಟಬೇಕೆಂದಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—58-60ವರೆಗೆ ಸಿಮೆಂಟಿಗೆ ಅಭಾವ ಇರಲಿಲ್ಲ. ಈ ತೊಂದರೆ ಹೇಗೆ ನಿವಾರಣೆ ಆಯಿತು ?

ಶ್ರೀ ಡಿ. ದೇವರಾಜ ಅರಸ್.—ಕೆಲವು ಕಡೆ ಕಟ್ಟಡಗಳಾಗಿವೆ, ಕೆಲವು ಕಡೆ ಅರ್ಧಮರ್ಧ ಆಗಿವೆ. ನಿಧಾನಕ್ಕೆ ಅದೂ ಒಂದೂ ಕಾರಣ ಎಂದು ಹೇಳಿದೆ.

Sri SANJEEVANATH AIKALA.—Apart from the passengers' shelters, is it not a fact that there are no shelters or garages for the buses to be kept at night and consequently some of the parts of the buses are being pilfered by some persons ?

Sri D. DEVARAJ URS.—The buses are not in need of shelters.

ಶ್ರೀ ಎಸ್. ಪಿ. ಹಾಯ್ದೆ.—ಮಂಜೇಕೇರಿ ತಾಲ್ಲೂಕಿನಲ್ಲಿ ಒಂದು ಷೆಡ್ಡಿಲ್ಲ. ಅಲ್ಲಿಗೂ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅಗತ್ಯ ಕಂಡು ಬಂದರೆ ಮಾಡೋಣ.

QUESTION FOR ANSWER ON THE DAY.
(but not taken up)

Number of Untrained S.S.L.C. and non-S.S.L.C. Teachers in Kolar District.

*Q.—1028. Sri P. VENKATAGIRIYAPPA (Kolar).—

Will the Government be pleased to state :—

(*a*) the number of untrained S.S.L.C. and Non-S.S.L.C. teachers in Kolar District ;

(*b*) whether they are aware that the Primary School teachers are deputed to Belgaum for Training and that they are put to great inconvenience :

(*c*) if so, whether they intend to expand the Teachers' Training Institute and start a Basic Training Institute at Kolar ?